ಮಾರ್ಚ್/ಏಪ್ರಿಲ್ **2025** ರ ಪರೀಕ್ಷೆ-1

**MARCH/APRIL 2025 EXAMINATION-1**

**A**

**CCE RF/RR/PF/PR**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8

[ Total No. of Printed Pages : 8

[ ಒಟ್ಟು ಪ್ರಶ್ನೆಗಳ ಸಂಖ್ಯೆ : 25

[ Total No. of Questions : 25

**ಸಂಕೇತ ಸಂಖ್ಯೆ : 28-K** **Code No. : 28-K**

# ವಿಷಯ : ಹಿಂದೂಸ್ಥಾನಿ ಸಂಗೀತ — ಶಾಸ್ತ್ರ ವಿಭಾಗ

# Subject : HINDUSTANI MUSIC — THEORY

**(ಕನ್ನಡ ಮಾಧ್ಯಮ / Kannada Medium)**

**(ಶಾಲಾ ಅಭ್ಯರ್ಥಿ / ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ)**

**(Regular Fresh / Regular Repeater / Private Fresh / Private Repeater)**

ದಿನಾಂಕ : 02. 04. 2025 ] [ Date : 02. 04. 2025

ಸಮಯ : ಮಧ್ಯಾಹ್ನ 2-00 ರಿಂದ ಸಂಜೆ 3-45 ರವರೆಗೆ ] [ Time : 2-00 P.M. to 3-45 P.M.

ಗರಿಷ್ಠ ಅಂಕಗಳು : 40 ] [ Max. Marks : 40

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

**Cut here/ಇಲ್ಲಿ ಕತ್ತರಿಸಿ**

1. ಈ ಪ್ರಶ್ನೆಪತ್ರಿಕೆಯು ಒಟ್ಟು 25 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖಿ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ***ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ (ಬಾಣದ ಗುರುತನ್ನು ಅನುಸರಿಸಿ)***. ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ಸೂಚಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.
6. ನಿಮಗೆ ವಿತರಿಸಲಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ( Version ) ಮತ್ತು ನಿಮ್ಮ ಪ್ರವೇಶ ಪತ್ರದಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ಇವೆರಡೂ ಒಂದೇ ಆಗಿರುವುದನ್ನು ಖಾತರಿಪಡಿಸಿಕೊಳ್ಳಿ.

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**

**ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ**

**Tear here**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ : 8 × 1 = 8**

1. ಹಿಂದೂಸ್ಥಾನಿ ಸಂಗೀತವನ್ನು 'ಉತ್ತರಾದಿ ಸಂಗೀತ'ವೆಂದು ಕರೆಯುವರು. ಏಕೆಂದರೆ, ಈ ಸಂಗೀತ ಪ್ರಕಾರವು

   (A) ಕರ್ನಾಟಕದಲ್ಲಿ ಮಾತ್ರ ಬೆಳೆದುಬಂದಿದೆ

   (B) ಉತ್ತರ ಭಾರತದಲ್ಲಿ ಬೆಳೆದುಬಂದಿದೆ

   (C) ಭಾರತದಾದ್ಯಂತ ಬೆಳೆದುಬಂದಿದೆ

   (D) ದಕ್ಷಿಣಭಾರತದಲ್ಲಿ ಬೆಳೆದುಬಂದಿದೆ

2. ಹಿಂದೂಸ್ಥಾನಿ ಸಂಗೀತದಲ್ಲಿ 'ವಾದಿಸ್ವರ' ಎಂದರೆ, ಅದು ರಾಗದ

   (A) ವರ್ಜ್ಯ ಸ್ವರ

   (B) ಪ್ರಧಾನ ಸ್ವರ

   (C) ಅನುವಾದಿ ಸ್ವರ

   (D) ಸಂವಾದಿ ಸ್ವರ

3. ದುರ್ಗಾ ರಾಗವನ್ನು ಔಡವ-ಔಡವ ಜಾತಿಯ ರಾಗವೆಂದು ಕರೆಯಲು ಕಾರಣವೇನೆಂದರೆ, ಈ ರಾಗದ ಆರೋಹಣ ಮತ್ತು ಅವರೋಹಣದಲ್ಲಿರುವ ಸ್ವರಗಳ ಸಂಖ್ಯೆ

   (A) 5-5

   (B) 5-6

   (C) 5-7

   (D) 4-5

4. ತಬಲವನ್ನು ಅವನದ್ಧ ವಾದ್ಯವೆಂದು ಕರೆಯಲು ಕಾರಣವೇನೆಂದರೆ, ತಬಲವು

   (A) ಪಾಶ್ಚಾತ್ಯ ಸಂಗೀತ ವಾದ್ಯವಾಗಿದೆ

   (B) ಕರ್ನಾಟಕ ಸಂಗೀತ ವಾದ್ಯವಾಗಿದೆ

   (C) ಚರ್ಮ ವಾದ್ಯವಾಗಿದೆ

   (D) ಸುಷಿರ ವಾದ್ಯವಾಗಿದೆ

5. ಹಿಂದೂಸ್ಥಾನಿ ತಾಳದಲ್ಲಿ 'ಹುಸಿ' ಗೆ ಇರುವ ಮತ್ತೊಂದು ಹೆಸರು

   (A) ತಾಲಿ

   (B) ಸಮ್

   (C) ಪೆಟ್ಟು

   (D) ಖಾಲಿ

6. ರಾಗವು ವಿಸ್ತಾರಗೊಂಡ ನಂತರ ಧೃತ್‌ಗತಿಯಲ್ಲಿ ಸಾಗುವ ಕಿರುರಚನೆಯೇ

(A) ಧೃಪದ್

(B) ಸ್ವರಗೀತೆ

(C) ಛೋಟಾ ಖಯಾಲ್

(D) ತರಾನ

7. ಪಂಡಿತ್ ಪಂಚಾಕ್ಷರಿ ಗವಾಯಿಗಳು ಜನಿಸಿದ ಸ್ಥಳ

(A) ಕಾಡಶೆಟ್ಟಿ ಹಳ್ಳಿ

(B) ಗದಗ

(C) ಕಾಗಿನೆಲೆ

(D) ಕುರಂದವಾಡ

8. ಶುದ್ಧ ಸ್ವರವು ತನ್ನ ನಿಯತ ಸ್ಥಾನ ಅಥವಾ ಪ್ರಮಾಣದಿಂದ ಕೆಳಗಿಳಿದಾಗ,

(A) ತಾರ ಸ್ವರ ಎನಿಸಿಕೊಳ್ಳುತ್ತದೆ

(B) ತೀವ್ರ ಸ್ವರವಾಗುತ್ತದೆ

(C) ಕೋಮಲ ಸ್ವರ ಉಂಟಾಗುತ್ತದೆ

(D) ಶುದ್ಧ ಸ್ವರವಾಗಿಯೇ ಉಳಿಯುತ್ತದೆ

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ : 8 × 1 = 8**

9. ಸ್ವರಲಿಪಿ ಪದ್ಧತಿಯಲ್ಲಿ ಸ್ವರಗಳ ಮೇಲೆ ಚುಕ್ಕೆ ಇಡಲು ಕಾರಣವೇನು ?

10. ದಾದರಾ ಹಾಗೂ ಕೆಹರವಾ ತಾಳಗಳಲ್ಲಿನ ಯಾವುದಾದರೂ ಒಂದು ವ್ಯತ್ಯಾಸವನ್ನು ಬರೆಯಿರಿ.

11. ಭೈರವ ರಾಗವನ್ನು ಉತ್ತರಾಂಗ ಪ್ರಧಾನ ರಾಗವೆಂದು ಕರೆಯುವರು ಏಕೆ ?

12. ಶ್ರವಣ ಸಾಧಕ ವಿದ್ಯೆ ಎಂದು ಕರೆಯಲ್ಪಡುವ ಕಲೆ ಯಾವುದು ?

13. ಹಿಂದೂಸ್ಥಾನಿ ಮತ್ತು ಕರ್ನಾಟಕ ಸಂಗೀತ ಎರಡು ಪ್ರಕಾರಗಳಲ್ಲಿ ಬಳಸಬಹುದಾದ ಯಾವುದಾದರೊಂದು ವಾದ್ಯವನ್ನು ಹೆಸರಿಸಿ.

14. ಖಯಾಲ ಪದದ ಅರ್ಥವನ್ನು ವ್ಯಾಖ್ಯಾನಿಸಿ.

15. ತೀವ್ರ ಸ್ವರ ಮತ್ತು ಕೋಮಲ ಸ್ವರಕ್ಕಿರುವ ಒಂದು ವ್ಯತ್ಯಾಸವನ್ನು ಬರೆಯಿರಿ.

16. ಬೃಂದಾವನಿ ಸಾರಂಗ ರಾಗದ ಆರೋಹಣ ಮತ್ತು ಅವರೋಹಣದಲ್ಲಿ ಕಂಡುಬರುವ ಯಾವುದಾದರೂ ಒಂದು ವ್ಯತ್ಯಾಸವನ್ನು ಬರೆಯಿರಿ.

**III. ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸಿ :** **7 × 2 = 14**

17. ಪಂಡಿತ ವಿಷ್ಣುದಿಗಂಬರ ಪಲುಸ್ಕರ್‌ರವರು ದೃಷ್ಟಿಹೀನರಾಗಲು ಕಾರಣವನ್ನು ತಿಳಿಸಿ.

18. ದುರ್ಗಾ ಮತ್ತು ಭೂಪ ರಾಗಗಳಲ್ಲಿನ ಯಾವುದಾದರೂ ಎರಡು ಸಾಮ್ಯತೆಗಳನ್ನು ಬರೆಯಿರಿ.

19. ಈ ಕೆಳಗೆ ಕೊಟ್ಟಿರುವ ರಾಗಗಳನ್ನು ಔಡವ-ಔಡವ ಮತ್ತು ಔಡವ-ಸಂಪೂರ್ಣ ರಾಗಗಳಾಗಿ ವರ್ಗೀಕರಿಸಿ ಬರೆಯಿರಿ :

    a) ಬಿಬಾಸ್

    b) ಮಾಲ್‌ಕೌನ್ಸ್

    c) ಪಟದೀಪ

    d) ಬಾಗೇಶ್ರೀ

20. ಭೈರವಿ ರಾಗದ ಆರೋಹಣ ಮತ್ತು ಅವರೋಹಣ ಸ್ವರಗಳನ್ನು ಬರೆಯಿರಿ.

21. ಛೋಟಾ ಖಯಾಲ್‌ನ ಲಕ್ಷಣಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

22. ಝುಪ್ತಾಲವು ಚೌತಾಲಕ್ಕಿಂತ ಭಿನ್ನವಾಗಿದೆ. ಹೇಗೆ ?

23. ಹಿಂದೂಸ್ಥಾನಿ ಸಂಗೀತ ಮತ್ತು ಕರ್ನಾಟಕ ಸಂಗೀತಕ್ಕಿರುವ ಯಾವುದಾದರೂ ಎರಡು ವ್ಯತ್ಯಾಸಗಳನ್ನು ಬರೆಯಿರಿ.

**IV. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ :**

24. ಖಮಾಜ್ ರಾಗದ ಸ್ವರಗೀತೆಯನ್ನು ಸ್ವರಲಿಪಿ ಪದ್ಧತಿಯಂತೆ ಲಿಪಿಬದ್ಧಗೊಳಿಸಿ. **4**

25. ಪುರಂದರದಾಸರು ಕರ್ನಾಟಕ ಸಂಗೀತಕ್ಕೆ ನೀಡಿದ ಕೊಡುಗೆಗಳನ್ನು ವಿವರಿಸಿ. **6**

DO NOT WRITE ANYTHING HERE